ಅಸಲು ದಾವಾ 242/2025 ಪಿ ಡಬ್ಲ್ಯೂ - 1 - ರಾಮಚಂದ್ರ ಕೆ ಎಲ್

**ಸಾಕ್ಷಿಯನ್ನು ದಿನಾಂಕಃ04.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಡಿ ಕೆ ಪಿ ವಕೀಲರಿಂದಃ**

1. ಪೂರ್ವಕ್ಕೆ – ರಸ್ತೆ, ಪಶ್ಚಿಮಕ್ಕೆ – ಹಳ್ಳ, ಉತ್ತರಕ್ಕೆ – ಹುಲ್ಲೇಬೋರೇಗೌಡನ ಜಮೀನು, ದಕ್ಷಿಣಕ್ಕೆ – ಚಿಕ್ಕಮರಿರವರ ಜಮೀನು ಚಕ್ಕುಬಂದಿಯೊಳಗೆ ಇರುವ ಜಮೀನನ್ನು ನಾನು ನೋಡಿದ್ದೇನೆ. ಅದು ನನ್ನ ಜಮೀನು. ಸಾಕ್ಷಿಯು ಮುಂದುವರಿದು ಸ ಉತ್ತರಕ್ಕೆ – ಹುಲ್ಲೇಬೋರೇಗೌಡನ ಮಗ ರಾಮಲಿಂಗಯ್ಯ ಇದ್ದು ದಕ್ಷಿಣಕ್ಕೆ– ಚಿಕ್ಕ ಮರಿರವರ ಮಗ ನಾಗರಾಜು ಇದ್ದಾರೆ ಎಂದು ನುಡಿದಿರುತ್ತಾರೆ. ಆ ಚಕ್ಕುಬಂದಿಯೊಳಗೆ ಇರುವ ಜಮೀನಿನ ಸರ್ವೆ ನಂಬರ್ 46/3 ಆಗಿದ್ದು ಅದರ ವಿಸ್ತೀರ್ಣ 1 ಎಕರೆ 3 ಗುಂಟೆ ಇದೆ. ಅದು ಕೊಣಸಾಲೆ ಗ್ರಾಮದಲ್ಲಿ ಇದೆ. ದಾವಾ ಆಸ್ತಿ ಮೂಲತಃ ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನಮ್ಮ ತಂದೆಗೆ ಒಟ್ಟು ನಾವು 5 ಜನ ಗಂಡು ಮಕ್ಕಳು

ಮತ್ತು ಒಬ್ಬಳು ಹೆಣ್ಣು ಮಗಳು. ನಮ್ಮ ತಂದೆ 1981 ರಲ್ಲಿ ಮೃತ ಪಟ್ಟಿದ್ದಾರೆ. ದಾವಾ ಆಸ್ತಿಯನ್ನು ನನ್ನ ತಂದೆ ನನಗೆ ಕೊಟ್ಟಿರುವ ಬಗ್ಗೆ ಬರವಣಿಗೆ ದಾಖಲೆಗಳು ಇಲ್ಲ. ನಮ್ಮ ಕುಟುಂಬದ ಸದಸ್ಯರು ನಮ್ಮ ಕುಟುಂಬದ ಆಸ್ತಿಗಳ ಬಗ್ಗೆ ಭಾಗಾಂಶಕ್ಕೆ ಯಾವುದೇ ಕೇಸ್ ಸಲ್ಲಿಸಿರಲಿಲ್ಲ.

2. ನಾನು ಎಂ ಎ ಪದವೀಧರ ಆಗಿದ್ದು, ಮೈಸೂರಿನಲ್ಲಿ ವಾಸ ಇದ್ದೇನೆ. ನಾನು 20 ವರ್ಷಗಳಿಂದಲೂ ಮೈಸೂರಿನಲ್ಲಿ ವಾಸ ಇದ್ದೇನೆ. ನನ್ನ ತಂದೆ ಮೃತ ಪಟ್ಟ ನಂತರ ಒಟ್ಟು ಕುಟುಂಬದ ವ್ಯವಹಾರವನ್ನು ಯಾರು ಮಾಡುತ್ತಿದ್ದರು ಎಂದರೆ ನಮ್ಮ ತಂದೆ ಬದುಕಿದ್ದಾಗಲೇ ಅವರ ಮಕ್ಕಳ ನಡುವೆ ಬಾಯಿಮಾತಿನ ವಿಭಾಗ ಆಗಿ ಎಲ್ಲರೂ ಬೇರೆ ಬೇರೆ ಇದ್ದೆವು. 1 ನೇ ಪ್ರತಿವಾದಿ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿದ್ದರು. ಅವರು ಬೆಸಗರಹಳ್ಳಿಯಲ್ಲಿ ವಾಸ ಇದ್ದಾರೆ. ನನ್ನ ಕೊನೆಯ ತಮ್ಮ ರಾಜಶೇಖರ್ ಬೆಸಗರಹಳ್ಳಿಯಲ್ಲ ವಾಸವಾಗಿದ್ದಾರೆ. ನನ್ನ ಇನ್ನೊಬ್ಬ ತಮ್ಮ ರಾಮಕೃಷ್ಣ ಬೆಂಗಳೂರಿನಲ್ಲಿ ವಾಸ ಇದ್ದಾರೆ. ನಮ್ಮ ಅಣ್ಣ ಶಂಕರಯ್ಯ ಮೃತ ಪಟ್ಟಿದ್ದಾರೆ. ಅವರ ಹೆಂಡತಿ ಮಕ್ಕಳು ಇದ್ದಾರೆ. ಊರಿನಲ್ಲಿ ವಾಸ ಇರುವ ನನ್ನ ಸಹೋದರರು ವಾಸ ಇರುವ ಮನೆ ಮಂಗಳೂರು ಹೆಂಚು ಮತ್ತು ಆರ್ ಸಿ ಸಿ ಮನೆ. ಆ ಆಸ್ತಿಯ ಖಾತೆ ನನ್ನ ಹಿರಿಯ ಅಣ್ಣ ಶಂಕರಯ್ಯನವರ ಹೆಸರಿನಲ್ಲಿ ಇದೆ. ಆ ಮನೆಯಲ್ಲಿ ನನಗೆ ಭಾಗಾಂಶದ ಹಕ್ಕು ಇತ್ತು. ಆ ಮನೆಯಲ್ಲಿ ಎಲ್ಲರಿಗೂ ಭಾಗಾಂಶದ ಹಕ್ಕು ಇದ್ದು, ನಮ್ಮ ಹಿರಿಯ ಅಣ್ಣನಿಗೆ ಬಿಟ್ಟುಕೊಟ್ಟಿದ್ದೇವೆ. ಆ ಬಗ್ಗೆ ಬರವಣಿಗೆ ದಾಖಲೆಗಳು

ಇಲ್ಲ. ಅವರಿಗೆ ಒಪ್ಪಿಗೆ ಪತ್ರದ ಮೂಲಕ ಖಾತೆ ಬದಲಾವಣೆ ಮಾಡಿಕೊಳ್ಳಬೇಕೆಂದು ನಾವು ಆ ಆಸ್ತಿಯನ್ನು ಬಿಟ್ಟು ಕೊಟ್ಟಿದ್ದೇವೆ ಎಂದರೆ ಸರಿ. ಪ್ರತಿವಾದಿಯರನ್ನು ಹೊರತು ಪಡಿಸಿ ನನ್ನ ಉಳಿದ ಸಹೋದರ ಮತ್ತು ಸಹೋದರಿಯರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ.

3. 1 ನೇ ಪ್ರತಿವಾದಿ ಬೆಸಗರಹಳ್ಳಿಯಲ್ಲಿ ಸುಮಾರು 20 ವರ್ಷಗಳಿಂದಲೂ ವಾಸ ಇದ್ದಾರೆ. 1985-86 ರಿಂದಲೂ ಅವರು ಬೆಸಗರಹಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಅವರಿಗೆ ಕೊಣಸಾಲೆ ಗ್ರಾಮದಲ್ಲಿ ವಾಸದ ಮನೆಯನ್ನು ಅವರ ಭಾಗಕ್ಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಮೈಸೂರಿನಲ್ಲಿ ನನ್ನ ಹೆಸರಿನಲ್ಲಿ ನಿವೇಶನ ಇದೆ. ರಾಮಕೃಷ್ಣ ರವರು ಬೆಂಗಳೂರಿನಲ್ಲಿ ಅವರ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿದ್ದಾರೆ. 1 ನೇ ಪ್ರತಿವಾದಿ ಬೆಸಗರಹಳ್ಳಿಯಲ್ಲಿ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿ ಮನೆಕಟ್ಟಿಕೊಂಡು ವಾಸ ಇದ್ದಾರೆ ಎಂದರೆ ಸರಿ.

4. ನಾನು ಈ ಕೇಸ್ ಹಾಕುವಾಗ ನನ್ನ ತಂದೆಗೆ ಇಂತಿಷ್ಟು ಆಸ್ತಿಗಳು ಪಿತ್ರಾರ್ಜಿತವಾಗಿ ಇದ್ದವು, ಅದರಲ್ಲಿ ನನಗೆ ಇಂತಹ ಆಸ್ತಿಗಳು ಬಂದಿವೆ ಎಂದು ಹೇಳಿದ್ದೇನೆ. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಒಟ್ಟು 4 ವರೆ ಎಕರೆ ಆಸ್ತಿ ಇತ್ತು. ದಾವಾ ಸ್ವತ್ತನ್ನು ಬಿಟ್ಟು ಉಳಿದ ಆಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತನ್ನು ಹೊರತು ಪಡಿಸಿ , ಸರ್ವೆ ನಂಬರ್ 142 ರಲ್ಲಿ 10 ಗುಂಟೆ ಹೊಲ ಮತ್ತು ಅದರ ಪಕ್ಕದಲ್ಲಿ 2 ವರೆ ಗುಂಟೆ

ತೋಟ ನನಗೆ ಬಂದಿರುತ್ತದೆ. 1 ನೇ ಪ್ರತಿವಾದಿಗೆ ವಿಭಾಗದಲ್ಲಿ ಯಾವ ಯಾವ ಆಸ್ತಿಗಳು ಬಂದಿತ್ತು ಎಂದು ಹೇಳಲು ನನಗೆ ಆಗುವುದಿಲ್ಲ. ಸಾಕ್ಷಿಯು ಮುಂದುವರಿದು ಅವರಿಗೆ ಬೆಸಗರಹಳ್ಳಿಯಲ್ಲಿ ಪ್ರತ್ಯೇಕ ಆಸ್ತಿ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ಶಂಕರಯ್ಯ ಮತ್ತು ರಾಮಕೃಷ್ಣ ರಿಗೆ ಮರಳಿಗ ಗ್ರಾಮದಲ್ಲಿ ಆಸ್ತಿಯನ್ನು ಕೊಟ್ಟಿದ್ದರು. ರಾಜಶೇಖರ ನಿಗೆ ನನ್ನ ಜಮೀನಿನ ಪಕ್ಕದಲ್ಲಿ 1 ಎಕರೆ ಜಮೀನನ್ನು ಕೊಟ್ಟಿದ್ದಾರೆ. ನನ್ನ ತಂಗಿಗೆ ಆಸ್ತಿಯನ್ನು ನೀಡಿರಲಿಲ್ಲ.

5. ನಾನು ದಾವೆ ಸಲ್ಲಿಸುವ ಕಾಲಕ್ಕೆ ನನಗೆ ಮತ್ತುನನ್ನ ಸಹೋದರರಿಗೆ ಇಂತಿಷ್ಟು ಆಸ್ತಿಗಳನ್ನು ವಿಭಾಗದಲ್ಲಿ ಕೊಡಲಾಗಿದೆ ಎಂದು ಹೇಳಿದ್ದೇನೆ. ಆ ಬಗ್ಗೆ ನನ್ನ ದಾವೆ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ.

**(ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.